ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊನ್ನೆತಾನೇ ಅಧ್ಯಕ್ಷರು, ಪ್ರವಾಸ ಹೋಗುವುದಕ್ಕೆ ಮುಂಚೆ ಒಂದು ನಂದರ್ಭದಲ್ಲಿ, ಸರ್ಕಾರದವರಿಗೆ ಉತ್ತರಗಳನ್ನೊದಗಿಸಲು ಏನಾದರೂ ಕಷ್ಟ ಎದ್ದರೆ, ಆ ಬಗ್ಗೆ ಕಾಗದವನ್ನು ಬರೆಯುಲು ಎಂದು ಹೇಳಿದರು. 150 ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲವೆಂದರೆ ಸರ್ಕಾರದವರು ಆ ಬಗ್ಗೆ ಏನಾದರೂ ತಮಗೆ ಬರೆದಿದ್ದಾರೆಯೇ ಎಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಬರೆದಿದ್ದಾರೆ.

ಶ್ರೀ ಎಂ. ಲಿಂಗೇಗೌಡ.—ನಾನು ಒಂದು ಅಲ್ಪ ಕಾಲಾವಧಿ ಪ್ರಶ್ನೆಯನ್ನು ಕಳಿಸಿದ್ದೆ, ಇರ್ವೀಗೇಷ್ ಸ್ಕೀಂ ನಲ್ಲಿ ಹಣಬೇಕೆಂದು ಮೈಸೂರು ಸರ್ಕಾರದವರು ಇಂಡಿಯಾ ಸರ್ಕಾರಕ್ಕೆ ಬರೆದಿಲ್ಲ ಎಂಬುದಾಗಿ ಕೇಂದ್ರದ ಉಪಮಂತ್ರಿಗಳಾದ ಎಂ. ವಿ. ಕೃಷ್ಣಪ್ಪನವರು ಕೋರಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು, ಈ ಅಲ್ಪ ಕಾಲಾವಧಿ ಪ್ರಶ್ನೆಯ ವಿಚಾರವೇನಾಯಿತೆಂಬುದು ಗೊತ್ತಾಗಲಿಲ್ಲ.

ಶ್ರೀ ಬಿ. ಡಿ. ಜತ್ತಿ.—ಸರ್ಕಾರದ ಕಡೆಯಿಂದ ಒಬ್ಬ ಸ್ಪೆಷಲ್ ಸೆಕ್ರೆಟರಿಯವರನ್ನು ಕೇಂದ್ರ ಸರ್ಕಾರದೊಡನೆ ಮಾತನಾಡಲು ಕಳಿಸಿಪ್ಪೆವು, ಅವರು ಎರಡನೆಯ ಕಂತಿನಲ್ಲಿ ಹಣ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ವೆಂಕಟೇಗೌಡ—ಅವರು ಹಣವನ್ನು ಕೊಡುವುದಕ್ಕೆ ಮೊದಲು ಸರ್ಕಾರದ ಕಡೆಯಿಂದ ಹಣವನ್ನೊದಗಿಸುವುದಕ್ಕೆ ಏಕೆ ವ್ಯವಸ್ಥೆ ಮಾಡಬಾರದು ?

ಶ್ರೀ ಬಿ. ಡಿ. ಜತ್ತಿ.—ಯಾವ ರೀತಿ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಹಣವನ್ನು ಹೇಗೆ ಬೇಗನೇ ಕೊಡಬೇಕೋ ಆ ಪ್ರಕಾರ ಸರ್ಕಾರ ಮಾಡುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಅಷ್ಟರೊಳಗಾಗಿ ಈಗ ತೆಗೆದಿರುವ ಬಾವಿಗಳನ್ನೆಲ್ಲ ಕುಸಿದು ಹೋಗುತ್ತವೆ. ಮಾಡಿದ ಕಾರ್ಯ ಸಫಲವಾಗಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಸರ್ಕಾರ ತೆಗೆದುಕೊಂಡಂಥ ಕಾರ್ಯಕ್ರಮವನ್ನು ಪೂರ್ತಿಕೆ ಮಾಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಕೇಂದ್ರ ಸರ್ಕಾರದ ಕೂಡ ಮಾತನಾಡಲು ಒಬ್ಬ ಸ್ಪೆಷಲ್ ಸೆಕ್ರೆಟರಿಯವರನ್ನು ಕಳಿಸಿದ್ದೆವು, ಈಗ ಕೇಂದ್ರ ಸರ್ಕಾರದವರು ಹಣ ಕೊಡುತ್ತೇವೆಂದು ಹೇಳಿದ್ದಾರೆ. ಆ ಹಣ ಬಂದ ಕೂಡಲೇ ಕೊಡುತ್ತೇವೆ.

NON-OFFICIAL RESOLUTION *Re.* RESIGNATION OF MINISTERS BEFORE GENERAL ELECTIONS Debate (*continued*).

†ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಅಧ್ಯಕ್ಷರೇ, ವಿರೋಧ ಪಕ್ಷದವರಾದ, ನಮ್ಮ ಪ್ರಜಾಸೋಷಿಯಲಿಸ್ಟ್ ಪಕ್ಷದ ಮಾನ್ಯ ಸದಸ್ಯರಾದ ರೇವಣಸಿದ್ದಪ್ಪನವರು ಈ ನಿರ್ಣಯವನ್ನು ತಂದಿರುವುದು ಬಹಳ ಮುಖ್ಯವಾದುದು. ಇದರ ಹಿನ್ನೆಲೆ ಏನಿದೆ ಎನ್ನುವುದನ್ನು ಕಾಂಗ್ರೆಸ್ ಆಡಳಿತದಲ್ಲಿರುವ ಮಂತ್ರಿಗಳು ಮತ್ತು ಸದಸ್ಯರೂ ಬಹು ಎಚ್ಚರಿಕೆಯಿಂದ ತಿಳಿದುಕೊಳ್ಳಬೇಕಾಗಿದೆ. 1947 ರಿಂದೀಚೆಗೆ ಮಹಾ ಚುನಾವಣೆಗಳಲ್ಲಿ ಏನೇನು ನಡೆದಿದೆ, ಕಾನೂನಿಗೆ ವಿರೋಧವಾಗಿ ಏನೇನು ನಡೆದಿದೆ ಎನ್ನುವುದನ್ನು ಅಂಕಿ ಅಂಶಗಳ ಸಮೇತ ಇಲ್ಲಿ ಮಾತನಾಡುವುದಾದರೆ ಸುಮಾರು ಎರಡು-ಮೂರು ದಿವಸಗಳಾದರೂ ವರ್ಣಿಸಲು ಅಸಾಧ್ಯವಾಗುತ್ತದೆ. ಮಹಾ ಚುನಾವಣೆಗಳಲ್ಲಿ ಸಾಮಾನ್ಯ ಜನತೆಗೆ ಏನೇನನ್ನು ಹೇಳಿದ್ದಿರೋ ಅದನ್ನೆಲ್ಲ ನೆರವೇರಿಸಲು ವಿಫಲರಾಗಿದ್ದೀರಿ ಮತ್ತು ಕಾಂಗ್ರೆಸ್ ನೀತಿಗೆ ವಿರೋಧವಾಗಿ ಮಹಾತ್ಮ ಗಾಂಧೀಜಿ ಮತ್ತು ಜವಹರ್‌ಲಾಲ್ ನೆಹರೂ ಅವರ ಹೆಸರನ್ನೂ ಕೇಳಿಕೊಂಡು ಚುನಾವಣೆಗಳಲ್ಲಿ ಮಾಡುವಾರದ್ದನ್ನೆಲ್ಲ

(ಶ್ರೀ ಎನ್. ಜಿ. ನರಸಿಂಹೇಗೌಡ)

ಮಾಡಿದ್ದೀರಿ. ಇದಕ್ಕೆ ನೀವು ತರೆ ಬಾಗಲೇಬೇಕು. ಪ್ರಜಾಪ್ರಭುತ್ವದಲ್ಲಿ ನಮ್ಮ ಮೂಲ ತತ್ವವೇನು ಎನ್ನುವುದನ್ನು ನೀವು ತಿಳಿದುಕೊಳ್ಳದೆ ಇದ್ದರೆ, ನಮ್ಮ ರಾಜ್ಯದಲ್ಲಿರುವ ಎರಡು ಕೋಟಿ ಮೂವತ್ತೆರಡು ಲಕ್ಷ ಪ್ರಜೆಗಳ ಆಡಳಿತವನ್ನು ನಿರ್ವಹಿಸುವುದಕ್ಕೆ ಶಕ್ತಿಯಿದೆಯೇ ಎಂದು ಆತ್ಮವನ್ನು ಮುಟ್ಟಿ ಹೇಳಬೇಕಾಗಿದೆ. ನೀವು ಆ ಆಡಳಿತವನ್ನು ನಿಜವಾದ ಕಾಲದಲ್ಲಿ, ಸಾಮಾನ್ಯವಾದ ಕಾಲದಲ್ಲಲ್ಲ, ಉಪಯೋಗಿಸುವ ಹಾಗೆ, ಮಹಾ ಚುನಾವಣೆಗಳ ಕಾಲದಲ್ಲಿ ಏಕೆ ಪ್ರಯೋಗ ಮಾಡಬೇಕು? ಪ್ರಜಾಪ್ರಭುತ್ವ ನೀತಿಯನ್ನು ಕೊರೆ ಮಾಡದೆ, ಸರಿಯಾದ ಮಾರ್ಗದಲ್ಲಿ, ಆ ಆಡಳಿತ ಮಾಡಿಕೊಂಡು ಹೋಗಲು ಏಕೆ ಆಗುವುದಿಲ್ಲವೆಂದು ಕಾಂಗ್ರೆಸ್‌ನವರನ್ನು ಕೇಳಬೇಕಾಗಿದೆ ಈ ಮಂತ್ರಿಗಳಲ್ಲಿ ನಾನು ಹೇಳುತ್ತೇನೆ. ಕೆಲವರು ಮಂತ್ರಿಗಳು ಮತ್ತು ಸದಸ್ಯರುಗಳು ಯೋಗ್ಯರಾದವರೂ ಇರಬಹುದು. ಕಾಂಗ್ರೆಸ್ಸಿನ ಮೆಂಬರುಗಳು ನಿಜವಾಗಿಯೂ ತತ್ವಶಃ ಆಗಿದ್ದವರು ಎನ್ನುವುದನ್ನು ಅವರೇ ಆತ್ಮವನ್ನು ಮುಟ್ಟಿ ನೋಡಿಕೊಳ್ಳಲಿ. ಆದರೆ ಮೆಜಾರಿಟಿ ಪೀಪಲ್ ಕಾಂಗ್ರೆಸ್ಸಿನ ಜನ ನಿಜವಾಗಿಯೂ ಅವರ ಡಿಕ್ಲರೇಷನ್ನು ಏನೂ, peoples Act ಏನು ಇದೆಯೋ ಅದನ್ನು ಉಪಯೋಗಿಸಿಕೊಳ್ಳದೆ ಅದಕ್ಕೆ ವಿರೋಧವಾಗಿ ಹೇಳಿಕೊಳ್ಳುತ್ತಾರೆ. ಯಾವ ಯಾವ ಮಾರ್ಗದಲ್ಲಿ ಇವರು ಚುನಾವಣೆಯಲ್ಲಿ ಅರಿಸಿಬರುತ್ತಾರೆ ಎನ್ನುವುದನ್ನು ಹೇಳುವುದಾದರೆ, ಸರಕಾರಿ ಕಾನೂನಿಗೆ ವಿರೋಧವಾದ ಮಾತುಗಳನ್ನು ಆಡಿ ಪ್ರಚಾರ ಮಾಡಿರತಕ್ಕದ್ದು. ಇದು ಹೇಗಿದೆ ಎಂದರೆ ಚುನಾವಣೆಯಾಗಿ ಬಂದ ತಕ್ಷಣದಲ್ಲಿ ನಮ್ಮ ಬಡ್ಜೆಟ್ಟಿನಲ್ಲಿ ಹೇಳದಿದ್ದರೂ ಕೂಡ ನೀವು ದೇಶದ ದುಡ್ಡನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಂತಹ ಬಾಬುಗಳಿಲ್ಲದಿದ್ದರೂ, ಅವಕಾಶವಿಲ್ಲದಿದ್ದರೂ ಅಂತಹ ಕೆಲಸವನ್ನು ಮಾಡಿಕೊಡುವುದು, ಮುಖ್ಯ ಮಂತ್ರಿಗಳಲ್ಲ. ಮಂತ್ರಿಗಳಾಗಿರತಕ್ಕವರು ಕಾನೂನಿಗೆ ವಿರೋಧವಾಗಿ ಮಾಡಿದರೆ ಅದು ಜನಗಳ ನೆಮ್ಮದಿಗೂ ವಿರೋಧ.

ಶ್ರೀ ಬಿ. ಡಿ. ಜತ್ತಿ.—ಕಾನೂನಿಗೆ ವಿರೋಧ ಎಂದು ತಾವು ಹೇಳುತ್ತಿದ್ದೀರಿ. ಯಾವ ಕಾನೂನಿನ ಸೆಕ್ಷನ್ನನ್ನು ಅಥವಾ ಯಾವ ಆರ್ಟಿಕಲ್ಲಿನ ಪ್ರಕಾರ ಎಂದು ಹೇಳಿದರೆ ಸರಿಯಾಗಿರುತ್ತದೆ. constitution or people's representation Act ಗೇ ಅಥವಾ ಇಂಡಿಯನ್ ಪೀನಲ್ ಕೋಡಿಗೆ ಎನ್ನುವುದನ್ನು evidence ಕೊಟ್ಟು ಹೇಳಬೇಕಾಗುತ್ತದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಅದನ್ನೆಲ್ಲಾ ಹೇಳುತ್ತೇನೆ. ಈಗ ಅವನ್ನು ಹೇಳಬೇಕಾದರೆ ನನಗೆ ಮೂರು ನಾಲ್ಕು ದಿನಗಳಷ್ಟು ಕಾಲ ಕೊಟ್ಟರೆ ಪಾಯಿಂಟ್ ಬೈ ಪಾಯಿಂಟು 1957ನೇ ಇಸವಿಯಿಂದ ಎಲೆಕ್ಷನ್ನು ಆದಾಗಿನಿಂದ ಏನೇನು ಕೆಲವು ಸದಸ್ಯರುಗಳು ಮಂತ್ರಿಗಳು ಮಾಡಿದ್ದಾರೆ ಎನ್ನುವುದನ್ನು ಖಚಿತವಾಗಿ ಹೇಳುತ್ತೇನೆ. ಸಂಸ್ಥಾನಾಮಳೆ ಅದಲ್ಲರಯೂ ಕೂಡ ತಿಳಿದುಕೊಂಡವರು ಕೆಲವರು ನ್ಯಾಯವಾಗಿ ಮಾತನಾಡುತ್ತಾರೆ. ಅಂತಹವರನ್ನು ನಾವು ಪ್ರಶಂಸೆ ಮಾಡಬೇಕು.

ಉಪಾಧ್ಯಕ್ಷರು.—ಕಾನ್ಸ್‌ಟಿಟ್ಯೂಷನ್ನಿನಲ್ಲೇ ಅಥವಾ ಯಾವುದರಲ್ಲಿ ಎನ್ನುವುದನ್ನು quote ಮಾಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಡೆಮಾಕ್ರಸಿಯಲ್ಲಿ ನಾವು ಜನಗಳಿಂದ ವೋಟನ್ನು ಪಡೆದುಕೊಂಡು ಬಂದು ಇಲ್ಲಿ ಆಡಳಿತ ನಡೆಸುವಾಗ ಕಾನೂನಿಗೆ ವಿರೋಧವಾಗಿ ಇಲ್ಲಿ ಆಡಳಿತ ನಡೆಸುವುದು ನ್ಯಾಯವೇ? ನೀತಿಯೇ ಹೇಗೆ?

ಶ್ರೀ ಬಿ. ಡಿ. ಜತ್ತಿ.—ನೀವು Against the constitution against the provisions of the Act ಎನ್ನುವುದನ್ನು ಹೇಳದೇ ಇದ್ದರೆ, ತಾವು ಹೇಳುವುದು ಸುಮ್ಮನೆ ಪತ್ರಿಕೆಗಳಲ್ಲಿ ಬರಬೇಕೆಂದು ಹೇಳುತ್ತೀರೇ ಹೊರತು. ಬೇರೇನೂ ಪ್ರಯೋಜನವಿಲ್ಲ.

ಶ್ರೀ ಎನ್. ಜಿ. ನರಸಿಂಹೇಗೌಡ.—ಪೇಪರಿನಲ್ಲಿ ಬರಲ ಎಂದು ಮಾತನಾಡತಕ್ಕ ವ್ಯಕ್ತಿಯಲ್ಲ. ನಿಜಾಂಶವನ್ನು ತಿಳಿದುಕೊಂಡು ಏನು ಹೇಳತಕ್ಕದ್ದೋ ಅದನ್ನು ಮಾತ್ರ ಹೇಳಬೇಕೆಂದು ನಾನು ತಿಳಿದುಕೊಂಡಿದ್ದೇನೆ. ನಾವೂ ನೀವೂ ಎಲ್ಲರೂ ಜನಗಳಿಂದ, ಚುನಾವಣೆಗೆ ಬಂದು ಚುನಾಯಿಸಿ ಬಂದಿರುವವರು ನಾನು ಮೊದಲೇ ಹೇಳುತ್ತೇನೆ. ಅನೇಕ ಪುಳ್ಳಾ ಪರಂಪರೆಗಳನ್ನು ಹೇಳುವಂತಹವರು ನಾವಲ್ಲ. ನೀವೇ ಆಗಲೀ ಯಾರೇ ಆಗಲೀ ರಾಜ್ಯಾಡಳಿತ ಮಾಡಬೇಕು. ಅದರೆ ಅದರಲ್ಲಿರತಕ್ಕ ನೈತಿಕ ಮಟ್ಟವನ್ನು ಉಪಯೋಗಿಸಿಕೊಳ್ಳಬೇಕು. ಸ್ವಾಮೀ, ನಮ್ಮಲ್ಲಿ ಮಹಾತ್ಮಜೀಯವರ ಹೆಸರನ್ನು ಹೇಳಿಕೊಂಡು ಪ್ರೊಹಿಬಿಷನ್ನು ಜಾರಿಗೆ ತಂದು ಅದರಿಂದ ಸಮಾಚಾರವನ್ನು ಉನ್ನತ ಸ್ಥಿತಿಗೆ ತರಬೇಕೆಂದು ತಂದರು. ಈ ಪ್ರೊಹಿಬಿಷನ್ನು ಏರಿಯಾದಲ್ಲಿ ಎರೆಕ್ಷನ್ನು ಕ್ಯಾಂಡಿಡೇಟಿಗಾಗಿ ಸರಕಾರಿ ಅಡಳಿತದಲ್ಲಿರತಕ್ಕವರು, ರಾತ್ರಿಯೋ ರಾತ್ರಿ ಕುಳಿತುಕೊಂಡು, ಅಲ್ಲಿನ ಜನಕ್ಕೆ ಮದ್ಯವನ್ನು ಸೇವನೆಮಾಡಿಸಿ ವೋಟುಗಳನ್ನು ತಗೆದುಕೊಳ್ಳತಕ್ಕ ಪದ್ಧತಿ ಸಮಾಜಕ್ಕೆ ವಿರೋಧವೇ ಅಲ್ಲವೇ? ಹೀಗೆ ಮುಂಚಿತವಾಗಿ ತಾವು ಹೇಗಿರಬೇಕು ಎನ್ನುವುದನ್ನು ಮೊದಲು ಕಲಿತುಕೊಳ್ಳಲಿ. ಹೀಗೆ ಮಾಡಬಾರದು. ಇನ್ನು ಕೆಲವು ಕಾಂಗ್ರೆಸ್ಸಿನ ಸದಸ್ಯರು ಮತ್ತು ಕೆಲವು ಮಂತ್ರಿಗಳು ಹೋದಕಡೆಯಲ್ಲಿ ಸಾವಚನ್ಯವಾಗಿ ಜನಗಳಲ್ಲಿ ತಮ್ಮ ಕಾಂಗ್ರೆಸ್ಸಿನಲ್ಲಿರುವ ಮೆಂಬರುಗಳೆಲ್ಲಾ ಸ್ವಾತಂತ್ರ್ಯವನ್ನು ಗಳಿಸಿದವರು ಎಂದು ಹೇಳುತ್ತಾರೆ. ಸ್ವಾತಂತ್ರ್ಯವನ್ನು ಗಳಿಸಿದವರು ಬರೀ ಕಾಂಗ್ರೆಸ್ಸಿನ ಸದಸ್ಯರಲ್ಲ, ಹಾಲಿ ಇರತಕ್ಕ ಸದಸ್ಯರೇ ಅಲ್ಲ. ಅನೇಕ ವಿರೋಧ ಪಕ್ಷದವರೂ ಕೂಡ ನಮ್ಮದೇಶ ಸ್ವಾತಂತ್ರ್ಯವಾಗಬೇಕು, ಬ್ರಿಟೀಷರನ್ನು ಪರದೇಶಕ್ಕೆ ಹೋಗಬೇಕೆಂದು ಹೇಳುತ್ತಿದ್ದವರಲ್ಲ ನಮ್ಮ ದೇಶದ ಗಂಡು ಮಕ್ಕಳು ಹೆಣ್ಣು ಮಕ್ಕಳಾದಿಯಾಗಿ ಇದರ ಸಲುವಾಗಿ ಪ್ರಾಣವನ್ನೂ ಕೊಟ್ಟಿದ್ದಾರೆ. ತಾವು ಒಬ್ಬರಿಗಾಗಿ ಸ್ವಾತಂತ್ರ್ಯವಲ್ಲ ಎನ್ನುವುದನ್ನು ಅರಿತುಕೊಳ್ಳಬೇಕು, ಇದರ ಮಹಾಚುನಾವಣೆಗಳಲ್ಲಿ ಹೇಳತಕ್ಕ ಮಾತುಗಳು ಮುಂದೆ. ನಾವು ಚುನಾವಣೆಯಾಗಿ ಮೆಜಾರಿಟಿಯಲ್ಲಿ ಬಂದರೆ ಮಂತ್ರಿಗಳಾಗಿಬರಬಹುದು. ನೀವು ಬಂದರೂ ಆಗಬಹುದು, ಅದು ಹೇಗಾಗುತ್ತೋ ಮುಂದೆ ನೋಡೋಣ ನೀವು ಹೇಳತಕ್ಕ ಪ್ರಣಾಳಿಕೆ ಇದೆಯಲ್ಲಾ ಅದು ತಪ್ಪುಭಾವನೆ. ಅದು ನಿಜವಾಗಿಯೂ ಸಮಾಜ ಘಾತುಕವಾದ ನಿಮ್ಮಲ್ಲರತಕ್ಕ ನೈತಿಕ ಮಟ್ಟವನ್ನು ಕಮ್ಮಿಮಾಡುವುದಕ್ಕೆ ಅವಕಾಶ ಕಲ್ಪಿಸುತ್ತಿದೆ. ಅಡಳಿತದಲ್ಲಿರುವಾಗ ಮಹಾಚುನಾವಣೆಗಳಿಗೆ ಪ್ರವೇಶ ಮಾಡಬಾರದು ಎಂದು ಹೇಳುತ್ತೇನೆ. ಇದಕ್ಕೆ ಬಹಳ ಮುಖ್ಯವಾದುದು ಎಂದು ಹೇಳುವುದಾದರೆ ಅದನ್ನು ನನಗೆ ಜವಾಬು ಕೊಡುವಾಗ ಹೇಳಲಿ. ಶ್ರೀಮಾನ್ ಜವಹರಲಾಲ್ ನೆಹರೂರವರು, ಮತ್ತು ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಶ್ರೀಮಾನ್ ಸಂಜೀವರೆಡ್ಡಿಯವರೂ ಮತ್ತು ನಮ್ಮ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು, ಅನೇಕ ಫಾಲ್ಟುಫಾರಂಗಳಲ್ಲಿ ನಮ್ಮಲ್ಲರುವ ಕಾಂಗ್ರೆಸ್ಸಿನ ಅಡಳಿತ ಅನೇಕ ಕಡೆ ಕೆಟ್ಟುಹೋಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಹೀಗಿರುವುದು ಸರಿಯಲ್ಲ ಹೀಗೆ ಅದರೆ ನಮ್ಮದೇಶ ಉದ್ಧಾರವಾಗುವುದಿಲ್ಲ, ಎಂದು ಹೇಳಿದಂತೆ ನಾನು ವಿರೋಧ ಪಕ್ಷದಲ್ಲಿದ್ದುಕೊಂಡು ಹೇಳುವುದಿಲ್ಲ.

ಶ್ರೀ ಟಿ. ಹನುಮಯ್ಯ.—ತಾವು ಯಾವ ಸಂದರ್ಭದಲ್ಲಿ ಹೇಳುತ್ತೀರಿ.

ಶ್ರೀ ಎನ್. ಜಿ. ನರಸಿಂಹೇಗೌಡ.—ಅನೇಕ ಸಂದರ್ಭಗಳಲ್ಲಿ ಹೇಪರುಗಳಲ್ಲಿ ಹೇಳಿರುವ ಸ್ಟೇಟುಮೆಂಟುಗಳಿವೆ. ಇದು ಕಾಂಗ್ರೆಸ್ಸಿನವರು ಹೇಳುವ ವೇದವಾಕ್ಯಗಳು.

ಶ್ರೀ ಟಿ. ಹನುಮಯ್ಯ.—On a point order Sir, ಮಾನ್ಯ ನರಸಿಂಹೇಗೌಡರು ನಮ್ಮ ಹೆಂಗಸರು ಮಕ್ಕಳು ಎಲ್ಲರೂ ಸ್ವಾತಂತ್ರ್ಯಕ್ಕಾಗಿ ದುಡಿದರು ಎಂದರು. ಅವರ ಪಾರ್ಟಿಯವರು ಯಾವಾಗ ಜೈಲಿಗೆ ಹೋಗಿದ್ದರು ಅಲ್ಲವೆ ಪಂಡಿತ ನೆಹರೂರವರು, ಕಾಂಗ್ರೆಸ್ಸು ಪ್ರೆಸಿಡೆಂಟರು ಯಾವ ಸಂದರ್ಭದಲ್ಲಿ ಎನ್ನುವುದನ್ನು ಹೇಳದೆ ನುಮ್ಮನೆ ಮೊಗಂ ಅಗಿ ಹೇಳುವುದು ಪರಿಯೇ?

ಉಪಾಧ್ಯಕ್ಷರು.—ಕಾಂಗ್ರೆಸ್ಸಿನ ಆಡಳಿತ ಹೇಗೆ ಕೆಟ್ಟುಹೋಗಿದೆ ಎಂದು ಹೇಳುತ್ತಾರೆ?

ಶ್ರೀ ಎನ್. ಜಿ. ನರಸಿಂಹೇಗಾಡ.—ಕಾಂಗ್ರೆಸ್ಸಿನ ಅನ್ಯಾಯದ ಪರಂಪರೆಗಳು ಬೇಕಾದಷ್ಟು ಪೇಪರುಗಳಲ್ಲಿ ಬಂದಿದೆ. ಅವನ್ನೆಲ್ಲಾ ಬೇಕಾದರೆ ಈ ನಥೆಯ ಮೇಜಿನಮೇಲೆ ಇಡುತ್ತೇನೆ. ಅಗರಾದರೂ ನೋಡಿಕೊಂಡು ಈ ಸದಸ್ಯರು ಅವರ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆಯೇ? ಇಂತಹ ಮಂತ್ರಿಗಳು ಆಗ ಹೊರಕ್ಕೆ ಹೋಗುತ್ತಾರೆಯೇ? ಒಂದು ಉದಾಹರಣೆಯನ್ನು ಹೇಳುತ್ತೇನೆ. ಅನೇಕ ಕಮಿಟಿಗಳಲ್ಲಿ ಇವರುಗಳೇ ಸದಸ್ಯರುಗಳಾಗಿರುತ್ತಾರೆ. ಕಾಂಗ್ರೆಸ್ಸಿನ ಪಕ್ಷವನ್ನು ಹೇಗಾದರೂಮಾಡಿ ಉಳಿಸಿಕೊಳ್ಳಬೇಕು. ಕರ್ಣಾಟಕವಾಗಬೇಕು ಎಂದು ಬಾಯಲ್ಲಿ ಹೇಳುತ್ತಿದ್ದಾರೆಯೇ ಹೊರತು ಮತ್ತೇನೂ ಕಾರ್ಯತಃ ಬೇರೆಯಿಲ್ಲ. ಆದರೆ ಈಗಿನ ಜನತೆ ಏಷ್ಟೇನೂ ದಡ್ಡರಲ್ಲ. ಅವರು ಕಮ್ಯೂನಿಸ್ಟ್ ಪಕ್ಷ ಮತ್ತು ಇತರ ಪಕ್ಷಗಳ ಹೊಣೆಗಾರಿಕೆ ಎಷ್ಟೆಂಬುದನ್ನು ಈ ಪ್ರಜಾಪ್ರಭುತ್ವದಲ್ಲಿ ವಿಚಾರಮಾಡಿಯೇ ಮಾಡುತ್ತಾರೆ. ಆದರೆ ಹೈಕಮ್ಯಾಂಡ್ ಅವರು ಹೇಳಿದ್ದಕ್ಕೆಲ್ಲಾ ವಿರೋಧನಡೆಯಬಾರದು ಎಂದು ಹೇಳುವಹಾಗೆ ಇಲ್ಲ. ಕೆಲವು ಆಜ್ಞೆಗಳನ್ನು ಕೂಲಂಕಷವಾಗಿ ವಿಚಾರಮಾಡಿ ತಮ್ಮ ದೇಶಕ್ಕನುಗುಣವಾದ ರೀತಿಯಲ್ಲಿ ಅವುಗಳನ್ನು ಜಾರಿಗೆ ತರಬೇಕು. ಮಂತ್ರಿಗಳಾದವರು ನಾನೇ ಯಾವಾಗಲೂ ಮಂತ್ರಿಯಾಗಿರಬೇಕು. ನನ್ನ ಮಂತ್ರಿಪದವಿಯನ್ನು ಉಳಿಸಿಕೊಳ್ಳಲಿಕ್ಕೆ ಎಲ್ಲ ಪ್ರಯತ್ನವನ್ನೂ ಮಾಡಬೇಕು. ಇಲ್ಲದಿದ್ದರೆ ನಾನು ಒಂದು ಚಾನ್ಸ್ ನೋಡಿಕೊಳ್ಳುತ್ತೇನೆ ಎಂದು ಹೇಳತಕ್ಕ ದುರುಪಯೋಗಗಳು ಇವತ್ತಿಗೂ ನಡೆಯುತ್ತಿವೆ. ನಾನು ತಿಳಿದಿರುವ ವಿಷಯವನ್ನೇ. ಹೇಳುತ್ತಿದ್ದೇನೆ. ನಿಜವಾಗಿ ಇವುಗೆ ರಾಜ್ಯಾಡಳಿತ ಮಾಡುವುದಕ್ಕೆ ಶಕ್ತಇದಯೇ ಎಂದು ನಾನು ಕೇಳುತ್ತೇನೆ. ನನ್ನ ಮುಂದೆಯಾವ ಯಾವದೋ ವಿಷಯುಗಳನ್ನು ಹೇಳಿದರೆ ಅವು ನನಗೆ ಗೊತ್ತಿಲ್ಲದೆ ಇಲ್ಲ. ನಾನೇನು ಈ ಸಭೆಗೆ ಹೊಸಬನೇನಲ್ಲ. ಸುಮಾರು 30–35 ವರ್ಷಗಳಿಂದಲೂ ಮೈಸೂರು ರೆಪ್ರಸೆಂಟೆಟಿವ್ ಅಸೆಂಬ್ಲಿ ಮೆಂಬರುಗಳಾಗಿದ್ದಂತಹವರ ವಿಷಯುಗಳೆಲ್ಲವೂ ನನಗೆ ಗೊತ್ತಿದೆ. ಆಗಿನ ಕಾಲದವರವಿಷಯಗಳನ್ನು ಕುರಿತು ಅಂಕ ಅಂಶಗಳನ್ನು ಬೇಕಾದರೆ ಕೂಡ ಬಲ್ಲೆ. ಪ್ರತಿಯೊಬ್ಬ ಸದಸ್ಯರು ಯಾವವರ್ಗಿಯವರೇ ಆಗಿರಲಿ, ಅವರು ಏನೇನು ಮಾಡಿದ್ದಾರೆ, ಅವರಿಗೆ ಏನೇನು ಆಸ್ತಿಪಾಸ್ತಿಇದೆ ಎಂಬುದನ್ನೆಲ್ಲಾ ನಾನು ಹೇಳಬಲ್ಲೆ. ಏಕೆಂದರೆ ನಾನು ಆ ರೀತಿ ಅಂಕ ಅಂಶಗಳನ್ನು ಶೇಖರಿಸಿರುತ್ತೇನೆ. ಓಟುಗಳಿಸುವ ಉದ್ದೇಶದಿಂದ ಇನ್ನೊಬ್ಬರನ್ನು ಮೆಚ್ಚಿಸಬೇಕೆಂಬ ಉದ್ದೇಶದಿಂದ ನಾನು ತಮ್ಮಲ್ಲಿ ಈ ರೀತಿ ಹೇಳುತ್ತಿಲ್ಲ. ನಾನು ಹೆಚ್ಚು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ನನ್ನ ಅಭಿಪ್ರಾಯಗಳನ್ನು ಸರ್ಕಾರದವರು ಕೂಲಂಕೂಷವಾಗಿ ವಿಮರ್ಶೆ ಮಾಡಬೇಕು. ಒಂದುವೇಳೆ ಏನಾದರೂ ಸರ್ಕಾರದ ಆಡಳಿತ ಕಾರ್ಯಕರಾಪಗಳಲ್ಲಿ ಲೋಪದೋಷಗಳಿನ್ನಾದರೂ ಇದ್ದಲ್ಲಿ, ಅವನ್ನು ವಿರೋಧಪಕ್ಷದ ಸದಸ್ಯರು ಎತ್ತಿತೋರಿಸಿದ ಪಕ್ಷದಲ್ಲಿ ಸರ್ಕಾರದವರು ಅವನ್ನು ಸರಿಪಡಿಸಬೇಕಾದುದು ಅವರ ಧರ್ಮ. ಆರೀತಿ ಈಚೀಚೆಗೆ ನಡೆಯುತ್ತಿಲ್ಲ. ನಿಮ್ಮ ಪಕ್ಷವನ್ನು ಉಳಿಸಿಕೊಳ್ಳುವ ಶಕ್ತಿ ಮೊರಿಹೊಗಿದೆ. ಅದು ಮುಂದೆ ಸ್ವಲ್ಪ ಕಷ್ಟ ಸಮಸ್ಯೆಯಿದಾಗಬಹುದು.

ಶ್ರೀ ಬಿ. ಡಿ. ಜತ್ತಿ.—ಅದೇ ತಪ್ಪು.

ಶ್ರೀ ಎಸ್. ಜಿ. ನರಸಿಂಹೇಗಾಡ.—ನೀವು ಮುಖ್ಯ ಮಂತ್ರಿಗಳಾಗಿದ್ದೀರಿ. ಏತಕ್ಕೋಸ್ಕರ ಆರೀತಿ ಹೇಳುತ್ತೀರಿ? ನಾವು ಆರೀತಿ ಹೇಳುವುದು ಧರ್ಮ.

ಶ್ರೀ ಜೆ. ಬಿ. ಮಲ್ಲಾರಾನ್ಯ.—ನಿಮ್ಮ ಧರ್ಮವನ್ನು ಮಾನ್ಯಸದಸ್ಯರು ಎತ್ತಿಹಿಡಿದು ಜನತೆಗೆ ತೋರಿಸುತ್ತಿದ್ದಾರೆ.

ಶ್ರೀ ಎಸ್. ಜಿ. ನರಸಿಂಹೇಗಾಡ.—ನಾನು ಹೇಳುವುದಿಷ್ಟೇ. ಈಗ 13–14 ವರ್ಷಗಳ ಕಾಲದಿಂದ ಚುನಾವಣೆಗಳಲ್ಲಿ ಅನೇಕ ರೀತಿಯಲ್ಲಿ ಆಡಳಿತ ಸೂತ್ರವನ್ನು ವಹಿಸಿಕೊಂಡಿರುವುದರಿಂದ ಮತ್ತು ನಾನಾರೀತಿಯಲ್ಲಿ ದುರಾಡಳಿತವನ್ನು ನಡೆಸುತ್ತಿರುವುದರಿಂದ ವಿಶೇಷ ಅನ್ಯಾಯ ಕೃತ್ಯಗಳ

ಪರಂಪರೆ ಜಾಸ್ತಿಯಾಗಿದೆ. ಆದ್ದರಿಂದ ನಾನು ಹೇಳತಕ್ಕದ್ದು ಏನೆಂದರೆ, ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನವರೇ ಆಗಲೀ, ಅಥವಾ ಇಂಡಿಯಾದೇಶದ ಪ್ರಧಾನ ಮಂತ್ರಿ ಶ್ರೀ ಜವಹರ್‌ಲಾಲ್ ನೆಹರೂ ಅವರೇ ಆಗಲೀ, ಶ್ರೀ ನಂಜೀವರೆಡ್ಡಿಯವರೇ ಆಗಲೀ ಸಾರ್ವಜನಿಕ ದೃಷ್ಟಿಯಿಂದ ಈ ಕಾಂಗ್ರೆಸ್ ಪಕ್ಷವನ್ನು ಕೂಡಲೇ ವಿಸರ್ಜಿಸುವುದು ಬಹಳ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ.—ಶ್ರೀಮಾನ್ ನರಸಿಂಹೇಗೌಡರು ನಮ್ಮ ಅಸೆಂಬ್ಲಿ ಸದಸ್ಯರು ಅಲ್ಲದೇ ಇರತಕ್ಕ ಮತ್ತು ಅಸೆಂಬ್ಲಿರೂಲ್ಸಿನ ಎಲ್ಲೆಗೆ ಒಳಿರತಕ್ಕವರ ಹೆಸರನ್ನು, ಅದರಲ್ಲೂ ಪ್ರಧಾನ ಮಂತ್ರಿಗಳ ಮತ್ತು ಶ್ರೀ ನಂಜೀವರೆಡ್ಡಿಯವರ ಹೆಸರನ್ನು ಈ ಸಭೆಯಲ್ಲಿ ತರತಕ್ಕದ್ದೂ ಸೂಕ್ತವಲ್ಲ. ಅಧ್ಯಕ್ಷರು ಈ ಬಗ್ಗೆ ಸೂಕ್ತ ಕ್ರಮವನ್ನು ಅವರ ಮೇರೆ ತೆಗೆದುಕೊಂಡು ಸರಿಯಾದ ರೂಲಿಂಗ್ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಅಸೆಂಬ್ಲಿಗೆ ಪ್ರಧಾನಮಂತ್ರಿಯವರು ಮತ್ತು ಶ್ರೀಮಾನ್ ನಂಜೀವರೆಡ್ಡಿಯವರು ಯಾವಾಗ ಬಂದು ನನ್ನ ಮಾನ್ಯಸ್ನೇಹಿತರಾದ ಶ್ರೀಮಾನ್ ನರಸಿಂಹೇಗೌಡರ ಹತ್ತಿರ ಮಾತನಾಡಿದರು ಎಂಬುದು ನನಗೆ ಗೊತ್ತಾಗಲಿಲ್ಲ. ಆ ರೀತಿಯಲ್ಲಿ ಅವರು ಮಾತನಾಡುವುದು ಸರಿಯಿಲ್ಲ. ನಮ್ಮ ಅಸೆಂಬ್ಲಿಗೆ ಸಂಬಂಧಪಟ್ಟುದನ್ನು ಮಾತ್ರ ಅವರು ಈ ಸಭೆಯಲ್ಲಿ ಹೇಳಬೇಕು. ಬೇರೆ ವಿಷಯಗಳನ್ನು, ಅದರಲ್ಲೂ ಇಂಡಿಯಾದೇಶದ ವಿಷಯವಾಗಿ ಅವರು ಪಾರ್ಲಮೆಂಟಿಗೆ ಸದಸ್ಯರಾಗಿ ಹೋದಾಗ ಬೇಕಾದರೆ ಹೇಳಲಿ. ಇಲ್ಲಿ ಹೇಳುವುದು ಬೇಡ. ಆ ರೀತಿ ಹೊರಗಿನವರ ವಿಷಯಗಳನ್ನು ಇಲ್ಲಿತರುವುದು ಬೇಡ.

ಉಪಾಧ್ಯಕ್ಷರು.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನೂಇಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಅಧ್ಯಕ್ಷರು ಈರೀತಿ ಹೇಳುವುದರಿಂದ ನನಗೇನೂ ಅಷ್ಟಾಗಿ ಮನಸ್ಸಿಗೆ ನೋವು ಆಗುವುದಿಲ್ಲ. ಇವರ ರಾಜ್ಯಾಡಳಿತ ಸರಿಯಾಗಿಲ್ಲದೇ ಇರುವುದರಿಂದ ಇವರಲ್ಲ ನಮಗೆ ಅಷ್ಟಾಗಿ ನಂಬಿಕೆಇಲ್ಲ. ಅದಕ್ಕೋಸ್ಕರವೇ ಜನರಲ್ ಚುನಾವಣೆಗೆ ಮೂರು ತಿಂಗಳುಗಳ ಮುಂಚಿತವಾಗಿ ಇವರು ತಮ್ಮ ಅಧಿಕಾರಕ್ಕೆ ರಾಜೀನಾಮೆ ಕೊಡಬೇಕು ಎಂಬುದಾಗಿ ನನ್ನ ಮಾನ್ಯಸ್ನೇಹಿತರಾದ ಶ್ರೀಮಾನ್ ರೇವಣಸಿದ್ದಪ್ಪನವರು ಒಂದು ನಿರ್ಣಯವನ್ನು ತಂದಿದ್ದಾರೆ. ಈಗ ನಮ್ಮ ಮೈಸೂರುಸಂಸ್ಥಾನ ಇದೀ ಇಂಡಿಯಾದೇಶಕ್ಕೆ ಮಾದರೀ ಸಂಸ್ಥಾನವಾಗಿದೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಆಡಳಿತ ದಕ್ಷತೆ ಎಲ್ಲ,ವಿಷಯಗಳಲ್ಲೂ ಮೇರೆಗಿರಬೇಕು. ಈ ಸಭೆಯಲ್ಲರತಕ್ಕ ಅನೇಕ ಮಾನ್ಯ ಸದಸ್ಯರು ಹಿಂದೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಅವರಿಗೂ ಆಗಿನ ಆಡಳಿತ ದಕ್ಷತೆ ಯಾವ್ರೀತಿ ಇತ್ತೆಂಬುದು ಜ್ಞಾಪಕವಿರಬೇಕು. ಎಷ್ಟು ಚೆನ್ನಾಗಿ ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದರು ಎಂಬುದು ನನಗೆ ಚೆನ್ನಾಗಿ ಗೊತ್ತು. ಪ್ರತಿಯೊಂದು ಕಾಗದವೂ ಬಹುಜಾಗ್ರತೆಯಾಗಿ ಡಿಸ್‌ಪೋಜ್ ಆಗುತ್ತಿತ್ತು. ಆದರೆ ಈಗ್ಗೆ 13 ವರ್ಷಗಳಿಂದ ನಡೆಯುತ್ತಿರುವ ಆಡಳಿತ ಕ್ರಮವನ್ನು ನೋಡಿದರೆ, ಇದುವರೆಗೂ ಸಾರ್ವಜನಿಕರಿಗೆ ಅಧಿಕಾರಿಗಳಿಂದ ನೇರವಾಗಿ ನ್ಯಾಯದೊರಕುತ್ತಾ ಇಲ್ಲ. ಕೇವಲ ಕಾಂಗ್ರೆಸ್ ಪಕ್ಷದಲ್ಲಿರತಕ್ಕ ಸದಸ್ಯರಿಗೆ ಮಾತ್ರ ನ್ಯಾಯ ದೊರಕುತ್ತಿದೆಯೋ ಹೊರ್ತು ನಮಗೆಲ್ಲಾ ಇಲ್ಲ. ನಾವೂ ಸಹ ಅವರ ಹಾಗೆಯೇ ಜನಗಳ ಪ್ರತಿನಿಧಿಗಳಾಗಿ ಬಂದಿರುವವರು ವಿರೋಧ ಪಕ್ಷದಲ್ಲಿ ನಮ್ಮ ಸ್ವಂತವಾಗಿ ಅನುಕೂಲಗಳನ್ನು ಪಡೆಯುವುದಕ್ಕೋಸ್ಕರ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನಗಳು ಎಲ್ಲಾ ರೂಪದಲ್ಲಿಯೂ ತೆರಿಗೆಗಳನ್ನು ಗ್ರಾಮಾಭಿವೃದ್ಧಿಗಾಗಿ ಮತ್ತು ದೇಶಾಭಿವೃದ್ಧಿಗಾಗಿ ಕೊಡುತ್ತಿರುವಾಗ, ಅಂತಹವರ ಅಹವಾಲು ಅರ್ಜಿಗಳನ್ನು ಮತ್ತು ಇತರ ಕಾಗದ ಪತ್ರಗಳನ್ನು ವಿರೋಧಪಕ್ಷವವರು ತಂದರೆ, ಸರ್ಕಾರದವರು ಅದನ್ನು ಚೆನ್ನಾಗಿ ವಿಮರ್ಶಿಸಬೇಕು. ದೇಶದ ಹಿತದೃಷ್ಟಿಯಿಂದ ಕಾನೂನು ಬದ್ಧವಿಂದ ಅವರಿಗೆ ನ್ಯಾಯರೀತಿಯಲ್ಲಿ ಸಹಕಾರ್ಯಗಳನ್ನು ಕಲ್ಪಿಸಿಕೊಡಬೇಕು. ಅದು ಅವರ ಕರ್ತವ್ಯ. ನಾನು ಇವತ್ತಿನದಿವಸ ಎಷ್ಟರಮಟ್ಟಿಗೆ ಇವರ ಆಡಳಿತದಲ್ಲಿ ಅನ್ಯಾಯವಾಗಿದೆ ಎಂಬುದಕ್ಕೆ ಅಂಕಿಅಂಶಗಳನ್ನು ಕೊಡಬಲ್ಲೆ. ಕಾಗದಪತ್ರಗಳನ್ನು ಸಹ ಕೊಡುತ್ತೇನೆ. ಎಷ್ಟೋ ನನ್ನ

(ಶ್ರೀ ಎಚ್. ಪಿ. ನರಸಿಂಹೇಗೌಡ)

ಕಾಗದಪತ್ರಗಳಿಗೆ ಇನ್ನೂ ಉತ್ತರವನ್ನೆ ಅವರು ಕೊಟ್ಟಿಲ್ಲ. ಯಾವಾಗ ಹೋಗಿ ಕೇಳಿದರೂ ತಾಳಿ, ನೋಡೋಣ ಎಂದು ಹೇಳುತ್ತಾರೆಯೇ ಹೊರ್ತು ಆ ಕಾಗದಗಳ ಮೇಲೆ ಅಂತ್ಯತೀರ್ಮಾನವನ್ನೆನೋ ಮಾಡಲೇಇಲ್ಲ. ಇದುವರೆಗೂ ಈ ತರಹ ಪದ್ಧತಿಯನ್ನೇ ಅನುಸರಿಸಿಕೊಂಡು ಬಂದಿದ್ದಾರೆ. ಇದರಿಂದ ನಾನು ಏನು ತಿಳಿಯುತ್ತೇನೆಂದರೆ ಈ ಕಾಂಗ್ರೆಸ್ ಪಕ್ಷಬಹಳ ಕಾಲವಿರುವುದಿಲ್ಲ ಎಂಬುದಾಗಿ ನನಗೆ ಗೊತ್ತಾಗುತ್ತಿದೆ.

ಕೊನೆಯದಾಗಿ ಇನ್ನೊಂದು ಮಾತನ್ನು ಹೇಳಕಾಗಿದೆ. 1947 ರಿಂದ ಬರದಿರತಕ್ಕ ಈ ಕಾಂಗ್ರೆಸ್ ಪಕ್ಷದವರು ಬಹಳ ಸತ್ಯವಂತರು ಎಂದು ಕೆಲವರು ಹೇಳುತ್ತಾರೆ. ಅದು ಸುಳ್ಳೆಂದು ನಾನು ಹೇಳಬೇಕಾಗಿದೆ. ಅದಕ್ಕೆ ಕೆಲವು ನಿದರ್ಶನಗಳನ್ನು ಕೊಡುತ್ತೇನೆ. ನಿಜವಾಗಿ ಯಾರೇ ಆಗಲೀ ನಮ್ಮ ಪಕ್ಷದವರ ಆಸ್ತಿ ಪಾಸ್ತಿಯನ್ನು ಸರ್ವೆಮಾಡಲಿ, ಕಾಂಗ್ರೆಸ್‌ಪಕ್ಷದ ಸದಸ್ಯರ ಆಸ್ತಿ ಪಾಸ್ತಿಯನ್ನೂ ಸಹ ಸರ್ವೆಮಾಡಲಿ 1947ಕ್ಕೆ ಹಿಂದೆ ಉಭಯಪಕ್ಷದವರಿಗೂ ಏನು ಆಸ್ತಿಇತ್ತು. ಇವತ್ತಿನ ದಿವಸ 1961ಕ್ಕೆ ಅಂದರೆ ಸುಮಾರು 14 ವರ್ಷಗಳಲ್ಲಿ ಎಷ್ಟರ ಮಟ್ಟಿಗೆ ಆಸ್ತಿಇದೆ ಎಂಬುದನ್ನು ಹೋಲಿಸಿ ನೋಡಿದರೆ ಯಾರಿಗೆ ಜಾಸ್ತಿ ಆಸ್ತಿಪಾಸ್ತಿ ಇದೆಯೆಂಬುದು ಅವರಿಗೇ ಮನವರಿಕೆಯಾಗುತ್ತದೆ. ಶ್ರೀಮಾನ್ ನಂಜೀವರೆಡ್ಡಿಯವರಿಗೆ ಮೊದಲು ಎಷ್ಟು ಆಸ್ತಿಇತ್ತು. ಈಗ ಅವರ ಆಸ್ತಿಪಾಸ್ತಿ ಮೇಲೆ ಎಷ್ಟು ಆದಾಯ ಬರುತ್ತಿದೆಯೆಂಬುದನ್ನು ನೋಡಿ. ಅದು ಹೇಗೆ ಅಷ್ಟು ಜಾಗ್ರತೆ ದೊಡ್ಡ ಆಸ್ತಿಯನ್ನು ಹೊಂದಿದ್ದಾರೆಂಬುದನ್ನು ಜನಗಳೇ ಎಚ್ಚೆತ್ತು ನೋಡಬೇಕು. ಇದರಿಂದ ಏನು ಗೊತ್ತಾಗುತ್ತದೆಂದರೆ ಆ ಪಕ್ಷದಲ್ಲಿ ಯಾವರೀತಿ ದುರಾಡಳಿತ ಕ್ರಮ, ಸ್ವೇಚ್ಛಾಡಳಿತ ರೀತಿನೀತಿ ಇದೆ ಎಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ಮುಂದಿನ ಮಹಾಚುನಾವಣೆಯಲ್ಲಿ ನಿಜವಾಗಿ ಅನ್ಯಾಯ ನಡೆಯುತ್ತದೆ. ಬಹಳ ಅಧರ್ಮಗಳಿಂದ ಚುನಾವಣೆಯನ್ನು ನಡೆಸುತ್ತಾರೆ. ಅದಕ್ಕಾಗಿ ಇವರು ಈಗಲೇ ಕಾಂಗ್ರೆಸ್ ಪಕ್ಷವನ್ನು ತಮ್ಮ ಅಧಿಕಾರದಿಂದ ವಿಸರ್ಜನೆ ಮಾಡಬೇಕು. ಏನೇ ಆಗಲಿ ಶ್ರೀಮಾನ್ ಜತ್ತಿಯವರ ಪೀರಿಡ್ಡಿನಲ್ಲಿ ವಿರೋಧ ಪಕ್ಷದವರಿಗೆ ಮುಂದೆ ಬರತಕ್ಕ ಮಹಾ ಚುನಾವಣೆಯಲ್ಲಿ ಅನ್ಯಾಯವಾಗಬಾರದು. ಯಾರೇಬರಲಿ ಮುಖ್ಯಮಂತ್ರಿಗಳು ಯಾರೇ ಆಗಲಿ, ದೇಶದಲ್ಲಿ ಅವರದು ಬಹಳ ಗುರುತರವಾದ ಜವಾಬ್ದಾರಿ. ಆದರೆ ಪಕ್ಷಪಾತವಿತದೆ ಮಹಾಚುನಾವಣೆಯನ್ನು ನ್ಯಾಯವಾಗಿ ನಡೆಸುತ್ತಾರೆಂಬ ನಂಬಿಕೆ ಹಿಂದಿನಿಂದಲೂ ನಮಗಿದೆ. ಈಗಲೂ ಆ ನಂಬಿಕೆ ಇದೆ. ಆದರೆ ಒಂದು ವೇಳೆ ಏನಾದರೂ ಅನ್ಯಾಯಗಳನ್ನು ಮಾಡಿದರೆ ಅದು ವ್ಯಕ್ತಿಗಳಿಗೇ ಹಾನಿಯೇ ಹೊರ್ತು ದೇಶಕ್ಕೆ ಏನೂ ಕ್ಷೇಮವಿಲ್ಲ ಆದ್ದರಿಂದ ಧರ್ಮವ್ಯತ್ಯಿಯಿಂದ ಮಹಾ ಚುನಾವಣೆಯನ್ನು ನಡೆಸುತ್ತಾರೆಂಬ ನಂಬಿಕೆ ನನಗೆ ಚೆನ್ನಾಗಿ ಉಂಟು. ಒಟ್ಟಿನಲ್ಲಿ ಈ ನಿರ್ಣಯಕ್ಕೆ ನಾನು ಬೆಂಬಲ ಕೊಂಟ್ಟು ಮುಂಖ್ಯಮಂತ್ರಿಗಳು ಮುಂದಿನ ಮಹಾ ಚುನಾವಣೆಯ ಕಾಲದಲ್ಲಿ ನ್ಯಾಯ, ಧರ್ಮಗಳಿಂದ ನಡೆಯುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise for Lunch and meet again after half an hour.

The House adjourned for recess at Ten of the Clock and reassembled at Forty Minutes Past Ten of the Clock.

ಅದಕ್ಕೆ ನಾನು ಇಷ್ಟೇ ಹೇಳುತ್ತೇನೆ. ಈ ದಿವಸ ಕಾಂಗ್ರೆಸ್ ಪಕ್ಷದಲ್ಲೇ ಅವರವರಲ್ಲೇ ಈ ಈ ಅಧಿಕಾರ ದುರುಪಯೋಗವಾಗುತ್ತದೆ ಎನ್ನುವ ವಿರೋಧ ಪಕ್ಷದ ಸದಸ್ಯರುಗಳಿಂತ ಜಾಸ್ತಿಯಾಗಿ ಆ ಕಾಂಗ್ರೆಸ್ ಸದಸ್ಯರಿಗಿರುತ್ತೆ. ನಾನು ಮುಂದಿನ ಅಧ್ಯಕ್ಷರಾದ ಶ್ರೀ ಜತ್ತಿಯವರನ್ನು ಕೆಳಗೆ ಹಾಕಬೇಕು ಎಂತ ನಿಜಲಿಂಗಪ್ಪನವರಿಗಿದ್ದರೆ, ಅವರು ಅಧಿಕಾರಕ್ಕೆ ಬರುತ್ತಾರಲ್ಲ– ಅವರನ್ನುರುಳಿಸಿ ನಾನು ಅಧ್ಯಕ್ಷ ಸ್ಥಾನಕ್ಕೆ ಬರಬೇಕು ಎಂತ ಇನ್ನೊಬ್ಬರು ಹೀಗೆಲ್ಲ ಅವರವರಲ್ಲೇ ಕಚ್ಚಾಟಗಳಿರುತ್ತವೆ. ಒಬ್ಬರ ಕೈಲಿರತಕ್ಕ ಅಧಿಕಾರವನ್ನು ಇನೊಬ್ಬರು ಕಸಿದುಕೊಳ್ಳಲು ಹವಣಿಸುತ್ತಿದ್ದಾರೆ. ಈಗ ಕೆಲವರು ಶ್ರೀ ಷಂಷುದ್ದೀನ್‌ರವರು ಅಧಿಕಾರಕ್ಕೆ ಬರಬೇಕೆಂದರೆ ಇನ್ನೊಬ್ಬರು ಅವರು ಬೇಡ ಮತ್ತೊಬ್ಬರು ಬರಲಿ ಎಂತ ಹೇಳುತ್ತಿರುವ ಮಾತುಗಳನ್ನು ಕೇಳಿದರೆ ನಮಗೂ ಸಹ ಮೈ ಸ್ವಲ್ಪ ಬಿಸಿಯಾಗುತ್ತದೆ.

ಶ್ರೀಮತಿ ಶಿವಪ್ಪನವರು ನಿರ್ಣಯವನ್ನು ವಿರೋಧ ಮಾಡಿ ಎಂದು ಹೇಳುತ್ತಿದ್ದಾರೆ. ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ನೀವು ಇತರರಿಗೆ ಮಾದರಿಯಾಗಿರಿ ಎಂದು ಹೇಳುತ್ತಿದ್ದೇನೆ. ಮಾದರಿ ಮೆಜಾರಿಟಿಯಲ್ಲಿರುವ ಮಂತ್ರಿಮಂಡಲ ಚುನಾವಣೆಗಳಲ್ಲಿ ಸಹ ಇತರರಿಗೆ ಮಾದರಿಯಾಗಿರಬೇಕು ಎಂದು ಹೇಳುತ್ತೇನೆ. ಚುನಾವಣೆಗಳಲ್ಲಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಕಲುಷಿತ ಮಾಡಲಲ್ಲ, ಭಂಡಾರದಲ್ಲಿರುವ ಹಣವನ್ನು ಉಪಯೋಗಿಸಿಕೊಳ್ಳಲಲ್ಲ. ಸರ್ಕಾರದ ಸವಲತ್ತುಗಳನ್ನು ದುರುಪಯೋಗಮಾಡಿಕೊಳ್ಳಲಲ್ಲ ಎಂದು ಹೇಳುವ ರೀತಿಯಲ್ಲಿ ವರ್ತಿಸಿ ನೀವೇ ಸಂವಿಧಾನವನ್ನು ಹಾಕಿಕೊಳ್ಳಿ ಎಂದು ಮಾತ್ರ ಹೇಳುತ್ತೇನೆ. ಇದನ್ನು ವಿರೋಧ ಮಾಡತಕ್ಕದ್ದು ಅಥವಾ ಒಪ್ಪತಕ್ಕದ್ದು ಎನ್ನುವ ಪ್ರಶ್ನೆಯಲ್ಲ. ಈ ವಿಚಾರವನ್ನು ಸರ್ಕಾರದವರು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಚುನಾವಣೆಗಳಲ್ಲಿ ನಿಷ್ಪಕ್ಷವಾದ ನಿಲುವನ್ನು ತಾಳಿ, ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬೇಡಿ, ಮಂತ್ರಿಮಂಡಳ ರಾಜೀನಾಮೆ ಕೊಡದೆ ಇದ್ದರೂ ಚಿಂತೆಇಲ್ಲ ಆದರೆ ಚುನಾವಣೆಗಳು ಹತ್ತಿರ ಬಂದಂಥ ಕಾಲದಲ್ಲಿ, ತಮ್ಮ ಕ್ಷೇತ್ರಗಳನ್ನು ಬಿಟ್ಟು ಇತರ ಕ್ಷೇತ್ರಗಳಲ್ಲಿ ತಮ್ಮ ಅಧಿಕಾರದ ಪ್ರಭಾವವನ್ನು ಬೀರಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಯವರು).—ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ಇದೇ ಮಾದರಿಯಾದ ಗೊತ್ತುವಳಿ ಈ ಸಭೆಯ ಮುಂದೆ ಬಂದಿತ್ತು. ಆ ಕಾಲಕ್ಕೆ ಮಾತನಾಡುವರು ಕೂಡ ಇದೇ ಧಾಟಿಯಿಂದ ಮಾತನಾಡಿದರು. ಅದಕ್ಕೆ ಉತ್ತರ ಕೂಡ ಕೊಡಲ್ಪಟ್ಟಿತು. ಪುನಃ ನಮ್ಮ ಸ್ನೇಹಿತರಾದ ರೇವಣಸಿದ್ದಪ್ಪನವರು ಮತ್ತೊಂದು ಗೊತ್ತುವಳಿಯನ್ನು ಮಂಡಿಸಿದ್ದಾರೆ. ಈ ಕಾಲಕ್ಕೆ ಮಾತನಾಡಿದವರೆಲ್ಲ ಸಾಧಾರಣವಾಗಿ ಸ್ವಲ್ಪಮಟ್ಟಿಗೆ ಇದೇ ರೀತಿಯಲ್ಲಿ ಮಾತನಾಡಿದರು. ಈ ಗೊತ್ತುವಳಿಯಲ್ಲಿ ಏನು ಹೇಳುತ್ತಾರೆಂದರೆ ಮಂತ್ರಿಗಳು ಚುನಾವಣೆಗೆ ಮೂರು ತಿಂಗಳ ಮೊದಲು ರಾಜೀನಾಮೆ ಕೊಡಬೇಕು ಎಂದು ಹೇಳಿದ್ದಾರೆ. ಇದರಲ್ಲಿ ರಾಜೀನಾಮೆ ಕೊಡಬೇಕು ಎನ್ನುವ ವಿಷಯ ಹಿಂದೆ ಚರ್ಚೆಯಾದ ಗೊತ್ತುವಳಿಯಲ್ಲಿರಲಿಲ್ಲ. ಈ ವ್ಯತ್ಯಾಸವಿರುವುದರಿಂದ ಎರಡೂ ಒಂದೇ ಮಾದರಿ ಆಗುವುದಿಲ್ಲ, ಚರ್ಚೆಗೆ ಅವಕಾಶ ಕೊಡಬೇಕು ಎಂದು ಕೇಳಿದ್ದರಿಂದ ಆಗಬಹುದು ಎಂದು ಹೇಳಿದೆವು. ಇದರೊಳಗೆ ಬಹಳ ಉದ್ದ ಉತ್ತರ ಕೊಡಬೇಕೆಂದು ನನಗೆ ಕಾಣಿಸುವುದಿಲ್ಲ. ಮೊನ್ನೆ ಎರಡು ಮಾತುಗಳನ್ನು ಹೇಳಿದ್ದೇನೆ. ಅದನ್ನೇ ಮತ್ತೆ ಇಂಗ್ಲೀಷಿನಲ್ಲಿ ಓದುತ್ತೇನೆ.

Under Article 344(1) of the Constitution, the Election Commission is an independent body and possesses executive powers of superintendence, direction and control over the preparation of the electoral rolls for all elections to the Legislature and the conduct of elections. The Government has no control over the Election Commission nor can it interfere in the directions issued by that body. So, the Election Commission ensures free

(Sri B. D. JATTI)

and open elections in India as in any other democratic country and neither the Governments i the States nor at the Centre has any control over it.

ಆರ್ಟಿಕಲ್ 324 (1)ರ ಪ್ರಕಾರ ಮತ್ತು ರಾಜ್ಯಾಂಗದಲ್ಲಿ ಏನು ಹೇಳಿದ್ದಾರೆಂದರೆ Election Commission ನರ್ವಾಧಿಕಾರವುಳ್ಳದ್ದು. ಅವರು ನಡೆಸತಕ್ಕ ಚುನಾವಣೆಗಳು, ಮತ್ತು ಮತದಾರರ ಪಟ್ಟಿ ಇವುಗಳಲ್ಲಿ ಹೆಚ್ಚು ಕಡಿಮೆ ಇದ್ದರೆ, ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವ ಸ್ವತಂತ್ರಸಂಸ್ಥೆಯಾಗಿರುವುದರಿಂದ ಕೇಂದ್ರ ಸರ್ಕಾರವಾಗಲೀ, ಆಥವಾ ಸಂಸ್ಥಾನ ಸರ್ಕಾರವಾಗಲೀ ಅದರೊಳಗೆ ಏನೂ ಕೈಹಾಕಲಿಕ್ಕೆ ಬರುವುದಿಲ್ಲ. ಆ ದೃಷ್ಟಿಯಿಂದ ಏನಾದರೂ ಅನ್ಯಾಯವಾಗಬಹುದು ಎಂದು ಸಹಿತ ಯಾರೂ ವಿಚಾರಮಾಡುವುದು ಸರಿ ಕಾಣುವುದಿಲ್ಲ.

Sri M. C. NARASIMHAN.—Does it not stand to common sense that if you are exclusively to work for the elections, it would be more convenient because it would not involve you in State work?

Sri B. D. JATTI.—That is a good suggestion from a member of the Communist Party. Let me assure him that we know what to do We know where our interest lies and we know that in regard to our party affairs we need no advice from the Communist Party.

Sri C. M. ARUMUGHAM.—Am I to understand that you will reject any suggestion from a member of the Communist Party, however good it is, simply because you do not like that party.

Sri B. D. JATTI.—I did not say so. It is the interpretation of Hon'ble Sri Arumugham, with whom I would not like to argue on such things.

ಎರಡನೆಯದು ಮಂತ್ರಿಗಳು ರಾಜೀನಾಮೆ ಕೊಡಬೇಕು. ಎಂದು ಹೇಳಿದ್ದಾರೆ.

If the Ministers resign, there cannot be a void. There is no provision in the Constitution under which the Governor can take over the administration. Even president's rule can be a substitute under Article 356 of the Constituion only if the president is satisfied that a situation has arisen in which the Government of a State cannot be carried on in accordance with the constitution. Since there is no such situation here wherein the Council of Ministers cannot carry on the Government in accordance with the provisions of the Constitution, there is no question for the president to interfere.

ಇವೆರಡೂ clear ಆಗಿವೆ. ನಮ್ಮ ರಾಜ್ಯಾಂಗದ ಪ್ರಕಾರ ರಾಜ್ಯಪಾಲರು ನಮ್ಮ ರಾಜ್ಯಾಡಳಿತವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ರಾಷ್ಟ್ರಾಧ್ಯಕ್ಷರ ಆಡಳಿತ ಬರಬೇಕಾದರೂ ಅಂಥ ಒಂದು ಪರಿಸ್ಥಿತಿ ದೇಶದಲ್ಲಿರಬೇಕು. ಸರ್ಕಾರವನ್ನು ನಡೆಸುವಂಥಪಕ್ಷದಲ್ಲಿ ಕೇರಳದಲ್ಲಿ ಯಾವರೀತಿ ನಡೆಯುತೋ ಅಂಥ ಸನ್ನಿವೇಶ ಬಂದಿಲ್ಲ ಮತ್ತು ಬರುವ ಸಂಭವವೂ

[Mr. DEPUTY SPEAKAR in the Chair]

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ನಿರ್ಣಯದ ಮೇಲೆ ನಾವಾಗಲೇ ಮಾತ ನಾಡಿದ್ದೇವೆ. ಆದರೆ ಈ ಹಿಂದೆ ಮುಗಿಸಿದ ಶ್ರೀ ನರಸಿಂಹರ್ಜರವರ ನಿರ್ಣಯದಲ್ಲಿ ಮಂತ್ರಿಗಳು ಚುನಾವಣೆಗಳಿಗೆ ಮುನ್ನ ರಾಜಿನಾಮೆ ಕೊಡಬೇಕೆಂಬ ಅಂಶವಿರಲಿಲ್ಲ. ಆದರೆ ಈಗ ಶ್ರೀ ರೇವಣಸಿದ್ದಪ್ಪನವರು ತಂದಿರತಕ್ಕ ನಿರ್ಣಯದಲ್ಲಿ ಮಂತ್ರಿ ಮಂಡಳ ಚುನಾವಣೆಗೆ ಮೂರು ತಿಂಗಳ ಮುನ್ನ ರಾಜಿನಾಮೆ ಕೊಡಬೇಕೆಂತಲೂ, ಆಗ ರಾಜ್ಯಾಡಳಿತವನ್ನು ರಾಜ್ಯ ಪಾಲರಿಗೆ ವಹಿಸಬೇಕೆಂತಲೂ ತಿಳಿಸರಾಗಿದೆ. ಮಂತ್ರಿಮಂಡಳ ಹಾಗೆ ರಾಜಿನಾಮೆ ಕೊಟ್ಟ ಬಳಿಕ ಆಡಳಿತ ರಾಜ್ಯಪಾಲರ ಕೈಗೆ ಹೋಗಲೇಬೇಕು. ಆಡಳಿತ ಕೇರ್‌ಟೇಕರ್ ಸರ್ಕಾರದ ಕೈಗೆ ಬಂದೇ ಬರುತ್ತೆ. ಹಾಗೆ ಕೇರ್‌ಟೇಕರ್ ಕೈಗೆ ಬಂದಾಗ ಈ ಮಂತ್ರಿಮಂಡಳ ಹೋಗೇ ಹೋಗುತ್ತೆ. ಆದರೆ ಮೊನ್ನೆ ತಾನೆ ಮುಖ್ಯಮಂತ್ರಿಗಳು ''ನಾವೂ–ನೀವು ಒಂದು ಸನ್ಮಾರ್ಗ ವನ್ನು ಅನುಸರಿಸೋಣ. ಚುನಾವಣೆಗಳ ಪಾವಿತ್ರತೆಯೇನಿದೆ ಅದನ್ನು ನಾವೆಲ್ಲರೂ ಕಾಪಾಡೋಣ'' ಎಂತ ಹೇಳಿದರು. ಅವರ ಹೇಳಿಕೆ ಬಹಳ ಸಾಧುವಾಗಿದೆ. ಆದರೆ ಅವರ ಪಕ್ಷದಲ್ಲಿರತಕ್ಕ ಕೆಲವು ಮಾನ್ಯ ಸದಸ್ಯರು ''ಮಂತ್ರಿಮಂಡಳ ಟೂರ್ ಮಾಡುವುದನ್ನು ಬಿಟ್ಟರೆ ದೇಶದಲ್ಲಿ ಹಾಗಾಗುತ್ತದೆ, ಹೀಗಾಗುತ್ತದೆ, ಸರ್ಕಾರ ನಮ್ಮ ಕೈಲಿರುವಾಗ ನಾವು ಏನು ಬೇಕಾದರು ಮಾಡಬಲ್ಲೆವು'' ಎಂತ ಇವರು ಮಾತನಾಡಿದ ಧಾಟಿಗೂ ಬಹಳ ವಿರೋಧವಿದ್ದಂತೆ ಕಾಣಿಸಿತು. ಶ್ರೀಮತಿ ಬೋರಣ್ಣಗಾಡರು ಮತ್ತು ಶ್ರೀ ಜಿ. ಶಿವಪ್ಪನವರೂ ಮಾತನಾಡುತ್ತ ''ನಮ್ಮ ಕೈಲಿ ಅಧಿಕಾರವಿರುವಾಗ ನಾವೇನು ಬೇಕಾದರೂ ಮಾಡುತ್ತೇವೆ'' ಎಂತ ಅವರೇನು ಆ ಒಂದು ಭೋರಣ್ಣಯಲ್ಲಿ ಮಾತನಾಡಿದರೋ ಅದು ಸರಿಯಲ್ಲ. ಆ ಅಧಿಕಾರ ಯಾರ ಕೈಲೇ ಇರಲಿ, ಆ ಪಾರ್ಟಿ ಕೈಲೇ ಇರಲಿ, ಈ ಪಾರ್ಟಿ ಕೈಲೇ ಇರಲೀ ಅಥವಾ ಮತ್ತೆ ಯಾವ ಪಾರ್ಟಿ ಯವರ ಕೈಲೇ ಇರಲೀ ಆ ಅಧಿಕಾರ ಕೈಗೆ ಸಿಕ್ಕಿದೆ ಎಂತ ಯಾರೂ ದುರುಪಯೋಗ ಕಾರ್ಯಗಳಿಗೆ ಅದನ್ನು ಬಳಸಬಾರದು. ಮೊನ್ನೆ ತಾನೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಇಂಗ್ಲೆಂಡ್ ಅಮೇರಿಕಾಗಳಲ್ಲಿ ಬ್ಯಾಡ್‌ಕ್ಯಾಸ್ಟ್ ಮಾಡಲು ಅಲ್ಲಿ ಯಂತ್ರ ಸಾಮಗ್ರಿಗಳ ಸಾಕಾರ್ಯವಿದೆ. ಆ ಸಾಕಾರ್ಯಗಳು ನಮ್ಮ ದೇಶಕ್ಕೆ ಬಂದಮೇಲೆ ನಾವೂ ಇಲ್ಲಿ ಹಾಗೆಯೇ ಮಾಡಬಹುದೆಂದು ಉತ್ತರ ಹೇಳಿದರು. ಆದರೆ ಮೊನ್ನೆ ತಾನೆ ನಮ್ಮ ರಾಜ್ಯಾದಂತವೂ ನಡೆದ ಅನೇಕ ಬಗೆಯ ಚುನಾವಣೆಗಳಲ್ಲಿ ಎಂದರೆ ಗ್ರಾಮಪಂಚಾಯ್ತಿಯಿಂದ ಹಿಡಿದು ತಾಲ್ಲೂಕ್-ಬೋರ್ಡು, ಇತರ ಡೆವಲಪ್‌ಮೆಂಟ್ ಕಮಿಟಿಗಳೂ, ಅದರಲ್ಲೂ ತತ್ಕಾಪಿ ಕೋಆಪರೇಟಿವ್ ಸೊಸೈಟಿಗಳ ಪ್ರೆಸಿಡೆಂಟ್ ಮತ್ತು ವೈಸ್-ಪ್ರೆಸಿಡೆಂಟರ ಚುನಾವಣೆಗಳಲ್ಲೂ, ಮುನಿಸಿಪಲ್ ಕೌನ್ಸಿ ರ್‌ಗಳ ಚುನಾವಣೆಯಲ್ಲೂ ಅಂದರೆ ನಾನೀಗ ಎಲ್ಲಾ ಮಂತ್ರಿಗಳ ಮೇಲೂ ಈ ಧಾರ್ಜನ್ನು ಮಾಡು ತ್ತಿಲ್ಲ. ಆದರೆ ಈ ಮಂತ್ರಿ ಮಂಡಳದಲ್ಲಿರುವ ಕೆಲವು ಮಂತ್ರಿಗಳು ಮಾತ್ರ ಈ ಚುನಾವಣೆಗಳಲ್ಲೆಲ್ಲ ಬಹಳವಾಗಿ ಇಂಟರ್‌ಫಿಯರ್ ಮಾಡಿರುತ್ತಾರೆ. ಈ ಮಂತ್ರಿಗಳಿಗೆ ಈ ಒಂದು ಗುಣ ಅವರು ಅಧಿಕಾರ ಬಿಟ್ಟರೂ ಅವರಿಗೆ ಇದು ಹೋಗವುದಿಲ್ಲ. ಆದರೆ ಕೆಲವು ಮಂತ್ರಿಗಳೇನೋ ಈ ವಿಚಾರದಲ್ಲಿ ಅವರು ಕೈ ಹಾಕಿರುವುದಿಲ್ಲ. ಆದರೆ ಈಗ ಈ ನಿರ್ಣಯದಲ್ಲಿ ಸೂಚಿಸಿರುವಂತೆ ಎಲ್ಲಾ ಮಂತ್ರಿಗಳೂ ಮತ್ತು ಎಲ್ಲ ಉಪ-ಮಂತ್ರಿಗಳೂ ಚುನಾವಣೆಗೆ ಮೂರು ತಿಂಗಳು ಮುಂಚೆ ರಾಜಿನಾಮೆ ಕೊಡ ದಿದ್ದರೂ ಚಿಂತೆ ಇಲ್ಲ ಆದರೆ ಈ ರೀತಿ ಈ ಮಂತ್ರಿಗಳು ರಾಜಿನಾಮೆ ಕೊಡಬೇಕೆಂತ ಯಾವ ಕಾನೂನಿ ನಲ್ಲೂ, ಎಲ್ಲಿಯೂ ಹೇಳಿಲ್ಲ. ಆದರೆ ಮೊನ್ನೆ ತಾನೆ ಮುಖ್ಯಮಂತ್ರಿಗಳು ಹೇಳಿರುವಂತೆ 'ನಾವೂ — ನೀವೂ' ಚುನಾವಣೆಗಳಲ್ಲಿ ಕೈ ಹಾಕುವುದು ಬೇಡ ಎನ್ನುತಕ್ಕ ವಿಚಾರದಲ್ಲಿ 'ನಾವೆಲ್ಲರೂ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನಾವು ದೇಶಕ್ಕೆಲ್ಲ ಮಾರ್ಗದರ್ಶಕರಾಗಿರುವಂತೆ ವರ್ತಿಸಬೇಕೆಂದೂ, ಸದಸ್ಯರು ಕೇವಲ ಅಸೆಂಬ್ಲಿಯಲ್ಲಿ ಒಂದು ಜೊಬ್ಬೆ ಹಾಕಿ ದರೇನೂ ಪ್ರಯೋಜನವಿಲ್ಲ, ಹೀಗೆ ಜೊಬ್ಬೆ ಹಾಕಿದ್ದರಿಂದಲೇನೂ ಜನರು ಓಟು ಕೊಡು ವುದಿಲ್ಲ, ಜನರಲ್ಲಿ ನಂಬಿಕೆ ಗಳಿಯುವಂತೆ ಅಲ್ಲಿ ನಡೆದುಕೊಂಡರೆ ಒಳ್ಳೆಯದಾಗುತ್ತೆಂದು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅವರು ಹೇಳಿದರು. ನಿಜ ಅವರು ಹೇಳಿರತಕ್ಕ ಮಾತುಗಳು ಎರಡು ಪಾರ್ಟಿಗೂ ಅನ್ವಯಿಸುತ್ತವೆ. ಈ ಹಿಂದೆ ದೇಶಕ್ಕೆ ಸ್ವಾತಂತ್ರ್ಯಗಳಿಸೋ ಕಾಲದಲ್ಲಿ ಪ್ರತಿಯೊಂದು ಪಕ್ಷಗಳೂ, ದೇಶದಲ್ಲಿರತಕ್ಕ ನಾನಾ ದರ್ಜೆಯ ಜನರೂ, ದೇಶಕ್ಕೆ ದುಡಿದಿದ್ದಾರೆ ಆದರೆ ಆಗ ಈ ಕಾಂಗ್ರೆಸ್ ಪಾರ್ಟಿ ಮುಂದಿನ ಪಂಕ್ತಿಯಲ್ಲಿತ್ತು. ಈ ಹಿಂದೆ ಇಂಗ್ಲೀಷರ ಆಡಳಿತವಿದ್ದಾಗ ಈ ಚುನಾವಣೆಗಳು ಮೈಸೂರು ದೇಶದಲ್ಲೇ ನಡೆಯಲ್ಲಿ ಅಥವಾ ಇಡೀ ಭಾರತದಲ್ಲಿ ನಡೆಯಲಿ—ಇವು ಎಲ್ಲಿ ನಡೆದರೂ ಅಧಿಕಾರದಲ್ಲಿರತಕ್ಕವರು ಪ್ರತ್ಯಕ್ಷವಾಗಿಯಾಗಲೀ ಅಥವಾ ಅಪ್ರತ್ಯಕ್ಷವಾಗಿಯಾಗಲೀ ಈ ಚುನಾವಣೆಗಳಲ್ಲಿ ಕೈ ಹಾಕಬಾರದೆಂದು ಆ ದಿವಸ ಒಂದು ನೀತಿ ಬೋಧೆಯನ್ನು ಮಾಡುತ್ತಿದ್ದಂಥ ಈ ಕಾಂಗ್ರೆಸ್ ಪಕ್ಷ, ಈ ದಿವಸ ಆ ಇಂಗ್ಲೀಷರ ಕಾಲದ ದಾಖಲತ್ತು ಇವರ ಕೈಗೆ ಬಂದಿರುವ ಕಾಲದಲ್ಲಿ, ಇವರು ಹಿಂದೆ ಅಧಿಕಾರದಲ್ಲಿಲ್ಲದೇ ಇದ್ದಾಗ್ಗೆ ಆ ಒಂದು ನೀತಿಯನ್ನು ಎಷ್ಟರ ಮಟ್ಟಿಗೆ ಆಗಿದ್ದೂ ಸರಕಾರಕ್ಕೆ ಥೋಥೆ ಮಾಡುತ್ತಿದ್ದರೋ ಆ ಮಟ್ಟದಲ್ಲಿ ಈಗ ಈ ಆದಳಿತ ಪಕ್ಷ ಈ ಕೆಲಸವನ್ನು ಸಾಧಿಸಿದರೆ ಸಾಕು. ಈ ಹಿಂದೆ ಕಾಂಗ್ರೆಸ್ ಪಕ್ಷದವರು ದೇಶದಲ್ಲಿರತಕ್ಕ ಜನಗಳಿಗೆ ಏನೇನು ಕೇಳಿದ್ದಾರೆ? ''ನಾವು ದೇಶವೆಲ್ಲಾ ಕೆರೆಗಳನ್ನು ಕಟ್ಟಿಸುತ್ತೇವೆ; ರಸ್ತೆಗಳನ್ನು ಮಾಡಿಸುತ್ತೇವೆ ನಿಮ್ಮ ಮಕ್ಕಳುಗಳಿಗೆಲ್ಲ ಅಸಿಸ್ಟೆಂಟ್ ಕಮಿಷನರುಗಳ ಕೆಲಸ ಕೊಡುತ್ತೇವೆ, ಅಸಿಸ್ಟೆಂಟ್ ಇಂಜಿನೀಯರ ಕೆಲಸಗಳನ್ನು ಕೊಡುತ್ತೇವೆ;'' ಎಂತ ಬಾಯಿಗೆ ಏನೇನೂ ಬರುತ್ತೋ ಅದನ್ನೆಲ್ಲಾ ಹೇಳಿದ್ದರು. ಆದರೆ ಈ ದಿವಸ ಕೈಗೆ ಅಧಿಕಾರ ಬಂದ ಮೇಲೆ ಆ ಕೆಲಸಗಳನ್ನು ಮಾಡದೆ, ತಮ್ಮ ನೀತಿ ಭೋಥೆಗೂ ಬೆರೆ ಕೊಡದೆ ಈ ಅಧಿಕಾರವನ್ನು ದುರುಪಯೋಗಪಡಿಸಿಕ್ಕೊಂಡರೆ ಅದು ಬಹಳ ತಪ್ಪಾಗುತ್ತದೆ. ಆದರೆ ಈಗ ನಾನು ಈ ಮಂತ್ರಿಗಳಿಗೆಲ್ಲ ರಾಜಿನಾಮೆ ಕೊಡಿ ಎಂತ ಹೇಳುವುದಿಲ್ಲ ಇವರಿಗೆ ಆ ನೀತಿ ಬಂದಾಗ ಹೊರತು ನಾವು ಇನ್ನಾವ ಅಸ್ತ್ರವನ್ನು ಇವರ ಮೇಲೆ ಪ್ರಯೋಗಿಸುವಂತಿಲ್ಲ. ಕಾನೂನನ್ನು ಕೈಲಿ ಅಧಿಕಾರ ಹಿಡಿದಿರತಕ್ಕವರು ಹೇಗೆ ಬೇಕಾದರೂ ವ್ಯಾಖ್ಯಾನ ಮಾಡಬಹುದು. ಆದರೆ ಅದು ಪ್ರಜಾಪ್ರಭುತ್ವ ನೀತಿಗೆ ಅನುಗುಣವಾಗಿರುವುದಿಲ್ಲ. ದೇಶದಲ್ಲಿ ಸರ್ವತೋಮುಖವಾದ ಅಭಿವೃದ್ಧಿಗೆ ಅಡಚಣೆ ಆಗುತ್ತೆ. ಈ ಚುನಾವಣೆಗಳು ನಡೆಯುವಾಗ ಅಧಿಕಾರ ನಮ್ಮ ಕೈಲಿರುವುದರಿಂದ ನಾವೇನು ಬೇಕಾದರೂ ಮಾಡಬಹುದೆಂದು ಕಾಂಗ್ರೆಸ್ ಪಕ್ಷದಲ್ಲಿರುವ ಕೆಲವು ಘಟೋದ್ಗಜರು ಆ ದಿವಸ ಏನು ಮಾತನಾಡಿದರೋ ಅದು ಅವರು ತಿಳಿದೇ ಮಾತನಾಡಿದರೋ ಅಥವಾ ತಿಳುವಳಿಕೆ ಇಲ್ಲದೇ ಮಾತನಾಡಿದರೋ ನನಗೆ ತಿಳಿಯದು. ಆ ಮಾತುಗಳನ್ನು ಕೇಳಿದರೆ ನಮಗೂ ಸಹ ಮೈ ಬಿಸಿಯಾಗುತ್ತೆ. ಆದರೆ ಈಗ ಈ ನಿರ್ಣಯ ತಂದಿರತಕ್ಕ ಶ್ರೀ ಕೆ. ಪಿ. ರೇವಣಸಿದ್ದಪ್ಪನವರ ಹಾಗೂ ಹಿಂದೆ ನಿರ್ಣಯ ಮಂಡಿಸಿದ್ದ ಶ್ರೀ ನರಸಿಂಹರವರ ಉದ್ದೇಶಗಳೆಲ್ಲಾ ದೇಶದಲ್ಲಿ ನಡೆಯತಕ್ಕ ಚುನಾವಣೆಗಳು ನ್ಯಾಯವಾದ ಮಾರ್ಗದಲ್ಲಿ-ನಿಷ್ಪಕ್ಷಪಾತವಾದ ರೀತಿಯಲ್ಲಿ ನಡೆಯತಕ್ಕ ಒಂದು ಅವಕಾಶವಿರಲಿ ಎಂಬುದು ಏನಾ ಮತ್ತೆ ಅವರಿಗೆ ಈ ಮಂತ್ರಿ ಮಂಡಳದ ಮೇಲೆನೂ ದ್ವೇಶವಿಲ್ಲ. ರಾಜಕೀಯ ಚಳುವಳಿಗಾರರಿಗೆ ಈ ಮೈಸೂರು ಮಾತೃಸ್ಥಾನ. ಈಗಿನ ಮಂತ್ರಿ ಮಂಡಳದಲ್ಲಿ ಹಿರಿಯರಾದ ಶ್ರೀ ವೀರಣ್ಣಗೌ ಇದ್ದಾರೆ. ಅಂಥವರಿರುವಾಗ ಈ ಮಂತ್ರಿಮಂಡಳ ಸತ್ಯಕ್ಕೆ ದೂರವಾಗಿ, ನೀತಿ ಬಾಹಿರ ರೀತಿಯಲ್ಲಿ ಯಾರೂ ನರ್ತಿಸದಂತೆ ಅವರು ತಮ್ಮ ಮಂತ್ರಿ ಮಂಡಳವನ್ನು ಪರಿವರ್ತನೆ ಮಾಡಿ ಈ ಚುನಾವಣೆಗಳೆಲ್ಲಾ ನಿಷ್ಪಕ್ಷಪಾತ ರೀತಿಯಲ್ಲಿ ನಡೆಯುವಂತೆ ಮಾಡಲು ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅವನ್ನೆಲ್ಲಾ ಕೈಗೊಂಡರೆ ಮೈಸೂರಿಗೂ ಒಂದು ಕೀರ್ತಿ; ಪ್ರಜಾಪ್ರಭುತ್ವ ಆದಳಿತಕ್ಕೂ ಈ ಮಂತ್ರಿ ಮಂಡಳ ಇಡೀ ಭಾರತಕ್ಕೇ ಒಂದು ಮೇಲ್ಪಂಕ್ತಿಯಾಗಿರುತ್ತದೆ. ಆದರೆ ಈ ನಿರ್ಣಯದಲ್ಲಿರತಕ್ಕ ತತ್ವವೆಲ್ಲಾ ಇಷ್ಟೇ. ಹೀಗಿದ್ದರೂ ಆಗಲೇ ಕೆಲವರು ಕಾಂಗ್ರೆಸ್ ಸದಸ್ಯರು ಹೇಳಿದಂತೆ ವಿರೋಧ ಪಕ್ಷದವರೀಗ ಈ ನಿರ್ಣಯವನ್ನು ತಂದಿದ್ದಾರೆಂಬ ಒಂದು ವ್ಯಾಮೋಹ. ಅಥವಾ ಮನೋಭಾವವೇನಾದರೂ ಮಂತ್ರಿಗಳಿದ್ದರೆ

(ಶ್ರೀ ಬಿ. ಡಿ. ಜತ್ತಿ)

ವರ್ಷಗಳಲ್ಲಿ ಏನೇನ ಕೆಲಸ ಮಾಡಿದ್ದೇವೆ ಅಥವಾ ಇಲ್ಲ ಎನ್ನುವುದನ್ನು ಹೇಳಿದರೆ ಅದನ್ನು ಜನ ಒಪ್ಪುತ್ತಾರೆ. ಶ್ರೀ ವೀರ್ ಮುಕ್ಕಣ್ಣಪ್ಪನವರ ಕ್ಷೇತ್ರದಲ್ಲಿ ನಾಲ್ಕು ಬಾವಿಗಳನ್ನು ಮಾಡುತ್ತೇವೆಂದು ಹೇಳಿದ್ದರೂ ಅದನ್ನು ಮಾಡದೇ ಹೋದರೆ ಸುಳ್ಳು ಎಂದು ಹೇಳುತ್ತಾರೆ. ಹೀಗೆ ಜನ ನಿಜವಾಗಿ ಯಾರು ಕೆಲಸ ಮಾಡಿದ್ದಾರೆ ಅಥವಾ ಇಲ್ಲ ಎನ್ನುವುದನ್ನೆಲ್ಲಾ ನೋಡಿಕೊಂಡು ಚುನಾವಣೆಯಲ್ಲಿ ಓಟು ಮಾಡುತ್ತಾರೆ. ಇದಕ್ಕಿಂತ ಹೆಚ್ಚಾಗಿ ಇದರ ಮೇಲೆ ಡಿಬೇಟ್‌ಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಕೇಳಿದ ಮೇಲೆ ಮಾನ್ಯ ಸದಸ್ಯರಾದ ಶ್ರೀ ವೀರ್ ರೇವಣಸಿದ್ದಪ್ಪನವರು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ ಎಂದು ನಂಬುತ್ತೇನೆ. ಹಾಗೆ ಅವರು ವಾಪಸ್ಸು ತೆಗೆದುಕೊಳ್ಳದಿದ್ದರೆ ನಾನು ಇದನ್ನು ವಿರೋಧ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.— ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಭರವಸೆಯ ಮೇಲೆ ಅವರ ಮಂತ್ರಿ ಮಂಡಲದಲ್ಲಿರತಕ್ಕ ಎಲ್ಲರೂ ಸತ್ಯವಂತರಾಗಿ ಕೆಲಸ ಮಾಡುತ್ತಾರೆ ಎಂದು ಹೇಳುವುದನ್ನು ನಂಬಿಕೊಂಡು ನಾನು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

NON-OFFICIAL RESOLUTION

[The Resolution was by leave of the House withdrawn.]

Re: **negotiating with the Government of Andra Pradesh Re: utilisation of the waters of the Manjra River.**

Sri B. SHAMSUNDAR (Bhalki).—Sir, I beg to move:

"That this Assembly is of the opinion that in order to ensure adequate supply of drinking water to the towns and villages in the Bidar District, and to irrigate garden crops for which the Bidar soil is famous all over India, the Government do negotiate with the Government of Andhra Pradesh as early as possible for the utilisation of the waters of the Manjra River in a manner beneficial to the people of both the States."

Mr. DEPUTY SPEAKER.—Resolution moved.

"That this Assembly is of the opinion that in order to ensure adequate supply of drinking water to the towns and villages in the Bidar District, and to irrigate garden crops for which the Bidar soil is famous all over India, the Government do negotiate with the Government of Andhra Pradesh as early as possible for the utilisation of the waters of the Manjra River in a manner beneficial to the people of both the States."

†Sri B. SHAMSUNDAR.—I think that this is the most non-controversial resolution and one which will benefit our State to the greatest extent. The northernmost part of our State, Bidar is now a desolated place. When you look into the history of this place, from ancient times, I need not go into all these now-this part of our state, was famous not only throughout the country, India but throughout the world. The name of Bidar was mentioned long before the muslim invaders came to India. In some of the poems, I do not know how far it is true-it is a